ಕರ್ನಾಟಕ ಸರ್ಕಾರ
ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ
ವಾರ್ತಾ ಸೌಧ, ಸಂಖ್ಯೆ 17, ಭಗವಾನ್ ಮಹಾವೀರ ರಸ್ತೆ, ಬೆಂಗಳೂರು – 560 001.

ಸಂಖ್ಯೆ : ವಾಇ : ಉ ನಿ : ಸುಮಪ : 2017-18 ದಿನಾಂಕ: 8-6-2017

# ಪತ್ರಿಕಾ ಆಮಂತ್ರಣ

1. **ಕರ್ನಾಟಕ ಶಿಲ್ಪಕಲಾ ಅಕಾಡೆಮಿ, ಬೆಂಗಳೂರು ಮತ್ತು ಬೆಂಗಳೂರು ಮೆಟ್ರೋ ರೈಲ್ ನಿಗಮ ನಿಯಮಿತ ವತಿಯಿಂದ:**
   **ರಾಜ್ಯ ಮಟ್ಟದ ಕಾಷ್ಠ ಶಿಲ್ಪಕಲಾ ಶಿಬಿರ:**

   ಉದ್ಘಾಟನೆ:

   ಪ್ರದೀಪ್ ಸಿಂಗ್ ಖರೋಲ,
   ವ್ಯವಸ್ಥಾಪಕ ನಿರ್ದೇಶಕರು,
   ಬಿಎಂಆರ್‌ಸಿಎಲ್, ಬೆಂಗಳೂರು.

   ಮುಖ್ಯ ಅತಿಥಿ:

   ಎಂ.ಎಸ್. ಅರ್ಚನಾ,
   ನಿರ್ದೇಶಕರು, ಕನ್ನಡ ಮತ್ತು ಸಂಸ್ಕೃತಿ ಇಲಾಖೆ,
   ಬೆಂಗಳೂರು.

   ಅಧ್ಯಕ್ಷತೆ:
   ಅಶೋಕ ಎನ್. ಚಲುವಾದಿ,
   ಜಂಟಿ ನಿರ್ದೇಶಕರು,
   ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಬೆಂಗಳೂರು ಹಾಗೂ ಆಡಳಿತಾಧಿಕಾರಿಗಳು, ಕರ್ನಾಟಕ ಶಿಲ್ಪಕಲಾ ಅಕಾಡೆಮಿ.

   ದಿನಾಂಕ: 09-06-2017, ಶುಕ್ರವಾರ, ಸಮಯ: ಮಧ್ಯಾಹ್ನ 12.00 ಗಂಟೆಗೆ

   ಸ್ಥಳ: ಬೆಂಗಳೂರು ಹಾತ್, ಸ್ವಾಮಿ ವಿವೇಕಾನಂದ ಮೆಟ್ರೋ ನಿಲ್ದಾಣ, ಹಳೇ ಮದ್ರಾಸ್ ರಸ್ತೆ, ಬೆಂಗಳೂರು.

2. ಕೌಶಲ್ಯ ಕರ್ನಾಟಕ
ಕರ್ನಾಟಕ ಸರ್ಕಾರ ಹಾಗೂ ಮೆ: ಸೀಮನ್ಸ್ ಇಂಡಸ್ಟ್ರಿ ಸಾಫ್ಟ್‌ವೇರ್
ಇವರ ಸಹಯೋಗದೊಂದಿಗೆ
ಸರ್ಕಾರಿ ಉಪಕರಣಗಾರ ಮತ್ತು ತರಬೇತಿ ಕೇಂದ್ರಗಳ
ಒಡಂಬಡಿಕೆ ಪತ್ರಕ್ಕೆ ಸಹಿ ಮಾಡುವ ಕಾರ್ಯಕ್ರಮ:

ಮುಖ್ಯಮಂತ್ರಿಗಳ ಸಮ್ಮುಖದಲ್ಲಿ ಬೃಹತ್ ಮತ್ತು ಮಧ್ಯಮ ಕೈಗಾರಿಕೆ ಹಾಗೂ ಮೂಲ ಸೌಲಭ್ಯ ಅಭಿವೃದ್ಧಿ ಸಚಿವರು, ನಗರಾಭಿವೃದ್ಧಿ ಮತ್ತು ಹಜ್ ಸಚಿವರು ಸಣ್ಣ ಕೈಗಾರಿಕಾ ಸಚಿವರು ಹಾಗೂ ಕಾರ್ಮಿಕ ಸಚಿವರುಗಳ ಉಪಸ್ಥಿತಿಯಲ್ಲಿ

ದಿನಾಂಕ: 9-6-2017, ಶುಕ್ರವಾರ, ಸಮಯ: ಸಂಜೆ 5-00 ಗಂಟೆಗೆ
ಸ್ಥಳ: ಸಮಿತಿ ಕೊಠಡಿ, 334, ಸಮ್ಮೇಳನ ಸಭಾಂಗಣ,
ವಿಧಾನ ಸೌಧ, ಬೆಂಗಳೂರು

**ಪತ್ರಿಕಾ ಪ್ರಕಟಣೆ**

**ವಿಧಾನ ಪರಿಷತ್ತಿನಲ್ಲಿ ಇಂದು:**

# 6 ನೇ ವೇತನ ಆಯೋಗ ರಚನೆ

ಬೆಂಗಳೂರು, ಜೂನ್ 8, (ಕರ್ನಾಟಕ ವಾರ್ತೆ):

ಪ್ರಸಕ್ತ ಆಯವ್ಯಯ ಭಾಷಣದಲ್ಲಿ ಘೋಷಿಸಿದಂತೆ, ರಾಜ್ಯ ಸರ್ಕಾರಿ ನೌಕರರ ಬೇಡಿಕೆಗಳನ್ನು ಪರಿಶೀಲಿಸಲು 6 ನೇ ರಾಜ್ಯ ವೇತನ ಆಯೋಗವನ್ನು ರಚಿಸಲಾಗಿರುತ್ತದೆ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ತಿಳಿಸಿದರು.

ಪದವೀಧರ ಕ್ಷೇತ್ರದಿಂದ ಚುನಾಯಿತರಾದ ವಿಧಾನ ಪರಿಷತ್ತಿನ ಸದಸ್ಯ ಕೆ.ಬಿ. ಶ್ರೀಕಂಠೇಗೌಡರ ಪ್ರಶ್ನೆಗೆ ಉತ್ತರಿಸುತ್ತಾ ರಾಜ್ಯ ಸರ್ಕಾರಿ ನೌಕರರ ವೇತನ ಮತ್ತು ಭತ್ಯೆಗಳಿಗೆ ಸೇರಿದಂತೆ ಪಿಂಚಣಿ, ತುಟ್ಟಿಭತ್ಯೆ ಮುಂತಾದ ಭತ್ಯೆಗಳನ್ನು ಪರಿಷ್ಕರಿಸುವ ವಿಷಯಗಳ ಬಗ್ಗೆ ಅಧ್ಯಯನ ಮಾಡಿ ಸರ್ಕಾರಕ್ಕೆ ವರದಿ ಸಲ್ಲಿಸುವುದು. 6 ನೇ ರಾಜ್ಯ ವೇತನ ಆಯೋಗವು ಒಬ್ಬರು ಅಧ್ಯಕ್ಷರು ಮತ್ತು ಇಬ್ಬರು ಸದಸ್ಯರುಗಳನ್ನು ಒಳಗೊಂಡಿರುತ್ತದೆ ಎಂದು ಸದಸ್ಯರ ಪ್ರಶ್ನೆಗೆ ಉತ್ತರಿಸಿದರು.

ಸೈಬರ್ ಜಾಗೃತಿ:

ಮೊಬೈಲ್ ಸೇವಾದಾರರನ್ನು ಸಂಪರ್ಕಿಸಿ ಸೈಬರ್ ಜಾಗೃತಿಯ ಬಗ್ಗೆ ಅರಿವಿನ ಸಮೂಹ ಸಂದೇಶಗಳನ್ನು ರವಾನಿಸುವ ಮೂಲಕ ಸಾರ್ವಜನಿಕ ಗ್ರಾಹಕರಿಗೆ ಮಾಹಿತಿ ನೀಡಲಾಗುವುದು ಎಂದರು.

ಸಾಮಾಜಿಕ ಜಾಲತಾಣಗಳಾದ ಫೇಸ್‌ಬುಕ್ ಹಾಗೂ ವ್ಯಾಟ್ಸ್‌ಅಪ್‌ನಲ್ಲಿ ಸೈಬರ್ ಜಾಗೃತಿಯ ಸಂದೇಶಗಳನ್ನು ರವಾನಿಸುವ ಮೂಲಕ ಸಾರ್ವಜನಿಕರಿಗೆ ಜಾಗೃತಿ ಮೂಡಿಸಲಾಗುತ್ತಿದೆ. ಸೈಬರ್ ಜಾಗೃತಿ ಸಪ್ತಾಹವನ್ನು ಆಚರಿಸುವ ಮೂಲಕ ಕರಪತ್ರಗಳನ್ನು ಮುದ್ರಿಸಿ, ಶಾಲೆಗಳಿಗೆ ಭೇಟಿ ನೀಡಿ ಕಾಲೇಜು ಸಮಾರಂಭಗಳಲ್ಲಿ ಭಾಗವಹಿಸಿ ಅರಿವನ್ನು ಮೂಡಿಸಲು ಕ್ರಮಕೈಗೊಳ್ಳಲಾಗುತ್ತಿದೆ ಎಂದರು ಸದನಕ್ಕೆ ತಿಳಿಸಿದರು.

# ಸೈಬರ್ ಕ್ರೈಂ ಆನ್‌ಲೈನ್ ವಂಚನೆಗಳಿಗೆ ಕಡಿವಾಣ

ಬೆಂಗಳೂರು, ಜೂನ್ 8, (ಕರ್ನಾಟಕ ವಾರ್ತೆ)

ಸೈಬರ್ ಕ್ರೈಂ ಅಪರಾಧಗಳನ್ನು ಪಡೆಯಲು ಹಾಗೂ ಸೈಬರ ಅಪರಾಧ ಪ್ರಕರಣಗಳ ತನಿಖೆಯನ್ನು ಕೈಗೊಳ್ಳಲು ಸಿ.ಐ.ಡಿ. ವಿಭಾಗ, ಪೊಲೀಸ್ ಆಯುಕ್ತರ ಕಚೇರಿ, ಬೆಂಗಳೂರು ನಗರ ಕೇಂದ್ರ ವಲಯ ಧಾರವಾಡ, ದಾವಣಗೆರೆ, ಮಂಗಳೂರು, ಮೈಸೂರು ಮತ್ತು ಕಲಬರುಗಿ ಸೇರಿದಂತೆ ಒಟ್ಟು 8 ಸೈಬರ್ ಪೊಲೀಸ್ ಠಾಣೆಗಳನ್ನು ಸ್ಥಾಪಿಸಲಾಗಿರುತ್ತದೆ ಎಂದು ಗೃಹ ಸಚಿವ ಡಾ. ಜಿ. ಪರಮೇಶ್ವರ್ ಅವರು ತಿಳಿಸಿದರು.

ಇಂದು ಸದನದಲ್ಲಿ ಮಾತನಾಡುತ್ತಾ ಕ್ರೆಡಿಟ್ ಕಾರ್ಡ್ ಮತ್ತು ಡೆಬಿಟ್ ಕಾರ್ಡ್‌ಗಳಲ್ಲಿ 5 ಲಕ್ಷಕ್ಕೆ ಮೇಲ್ಪಟ್ಟ ವಂಚನೆ ಪ್ರಕರಣಗಳಲ್ಲಿ ಹಾಗು 50 ಲಕ್ಷಕ್ಕೆ ಮೇಲ್ಪಟ್ಟ ಫ್ರಾಡ್ಸ್ ಮತ್ತು ಆನ್‌ಲೈನ್ ಮೂಲಕ ವಂಚಿಸಿ ಹಣ ವರ್ಗಾವಣೆಗಳಲ್ಲಿ ಪ್ರಕರಣಗಳನ್ನು ಸೈಬರ್ ಅಪರಾಧ ವಿಭಾಗಗಳಿಗೆ ವರ್ಗಾವಣೆ ಮಾಡಿ ತನಿಖೆಯನ್ನು ಕೈಗೊಳ್ಳಲಾಗುವುದು ಎಂದು ಸದನಕ್ಕೆ ತಿಳಿಸಿದರು.

ಸೈಬರ್ ಅಪರಾಧಗಳ ಬಗ್ಗೆ ಸಾರ್ವಜನಿಕರಲ್ಲಿ ತಿಳುವಳಿಕೆ ಮೂಡಿಸುವ ಸಲುವಾಗಿ ಮುದ್ರಣ ಮಾಧ್ಯಮಗಳಲ್ಲಿ ವರದಿಗಳನ್ನು ವಿಧಾನ ಪರಿಷತ್ತಿನಲ್ಲಿ ತಿಳಿಸಿದರು.

ಎಸ್‌ಎಂ:ಕೆಎನ್‌ವಿ:ಜಿಪಿಆರ್.

# ಪರಿಶಿಷ್ಟ ಜಾತಿ, ಪಂಗಡದ ಉದ್ದಿಮೆದಾರರಿಗೆ
# ಗರಿಷ್ಠ 10 ಕೋಟಿ ರೂ. ಸಾಲ

ಬೆಂಗಳೂರು, ಜೂನ್ 8, (ಕರ್ನಾಟಕ ವಾರ್ತೆ)

ಪರಿಶಿಷ್ಟ ಜಾತಿ ಉದ್ದಿಮೆದಾರರಿಗೆ ಸಮಾಜ ಕಲ್ಯಾಣ ಇಲಾಖೆಯ ವತಿಯಿಂದ ಸರ್ಕಾರದ ಬಡ್ಡಿ ಸಹಾಯಧನ ಯೋಜನೆಯನ್ನು ಸಂಸ್ಥೆಯಲ್ಲಿ ಮತ್ತು ಪರಿಶಿಷ್ಟ ಪಂಗಡದ ಉದ್ದಿಮೆದಾರರಿಗೆ ಜಾರಿಗೊಳಿಸಲಾಗಿದೆ. ಈ ಯೋಜನೆಯನ್ವಯ ಪರಿಶಿಷ್ಟ ಜಾತಿ, ಪಂಗಡದ ಉದ್ದಿಮೆದಾರರಿಗೆ ನಿವ್ವಳ ಶೇ 4 ರಷ್ಟು ಬಡ್ಡಿದರದಲ್ಲಿ ಅವಧಿ ಸಾಲವನ್ನು ಕನಿಷ್ಠ 10 ಲಕ್ಷ ದಿಂದ ಗರಿಷ್ಠ 10 ಕೋಟಿಯವರಿಗೆ ನೀಡಲಾಗುತ್ತಿದೆ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ತಿಳಿಸಿದರು.

ಸದನದಲ್ಲಿ ಸದಸ್ಯೆ ಮೋಟಮ್ಮ ಕೇಳಿದ ಪ್ರಶ್ನೆಗೆ ಉತ್ತರಿಸುತ್ತಾ ಸಂಸ್ಥೆಯು ವಿಧಿಸುವ ಸಾಮಾನ್ಯ ಬಡ್ಡಿದರ ಮತ್ತು ಪ್ರತಿಶತ ಶೇ 4 ವ್ಯತ್ಯಾಸದ ಬಡ್ಡಿ ಹಣವನ್ನು ಸಮಾಜ ಕಲ್ಯಾಣ ಇಲಾಖೆ ಭರಿಸುತ್ತದೆ ಎಂದು ಸದಸ್ಯರಿಗೆ ತಿಳಿಸಿದರು.

ಎಸ್‌ಎಂ:ಕೆಎನ್‌ವಿ:ಜಿಪಿಆರ್.

## <u>ವಿಧಾನಸಭೆಯಲ್ಲಿ ಇಂದು:</u>

ಬೆಂಗಳೂರು, ಜೂನ್ 8, (ಕರ್ನಾಟಕ ವಾರ್ತೆ)

**ಮೈಸೂರು ಜಿಲ್ಲೆ, ಮೈಸೂರು ತಾಲ್ಲೂಕು ಚಾಮುಂಡಿ ಬೆಟ್ಟ ಗ್ರಾಮ ಪಂಚಾಯಿತಿಯಲ್ಲಿ ಪೌರ ಕಾರ್ಮಿಕರಿಂದ ಮ್ಯಾನ್ ಹೋಲ್ ಶುಚಿಗೊಳಿಸಿರುವ ಪ್ರಕರಣ ಮೇಲ್ನೋಟಕ್ಕೆ ಸಾಬೀತಾಗಿದ್ದು, ಸಂಬಂಧಿಸಿದ ಗ್ರಾಮ ಪಂಚಾಯಿತಿ ಅಭಿವೃದ್ಧಿ ಅಧಿಕಾರಿಯನ್ನು ಅಮಾನತ್ತುಗೊಳಿಸಲಾಗಿದೆ. ಮತ್ತು ಗ್ರಾಮ ಪಂಚಾಯಿತಿ ಅಧ್ಯಕ್ಷರಾದ ಗೀತಾ ಮತ್ತು ಪಂಚಾಯಿತಿ ಅಭಿವೃದ್ಧಿ ಅಧಿಕಾರಿ ಆನಂದ್ ಎಂಬುವವರ ಮೇಲೆ ಮೈಸೂರು ನಗರದ ಕೃಷ್ಣರಾಜ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಿಸಲಾಗಿದೆ ಎಂದು ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವ ಹೆಚ್.ಕೆ. ಪಾಟೀಲ್ ಅವರು ವಿಧಾನಸಭೆಯಲ್ಲಿ ತಿಳಿಸಿದರು.**

ಮುಧೋಳ ಶಾಸಕರಾದ ಗೋವಿಂದ ಕಾರಜೋಳ ಅವರ ಚುಕ್ಕೆ ಗುರುತಿನ ಪ್ರಶ್ನೆಗೆ ಉತ್ತರಿಸಿದ ಸಮಾಜ ಕಲ್ಯಾಣ ಸಚಿವ ಹೆಚ್. ಆಂಜನೇಯ 2014-15 ರಿಂದ 2017-18 ಸಾಲಿನವರೆಗೆ ಮುಧೋಳ್ ತಾಲ್ಲೂಕಿಗೆ 20 ಡಾ. ಬಿ.ಆರ್. ಅಂಬೇಡ್ಕರ್ ಭವನ ಮತ್ತು 20 ಡಾ. ಬಾಬು ಜಗಜೀವನ್‌ರಾಮ್ ಭವನಗಳನ್ನು ಮಂಜೂರು ಮಾಡಿದ್ದು 67 ಲಕ್ಷ ಅನುದಾನವನ್ನು ಕಾಮಗಾರಿಗೆ ಬಿಡುಗಡೆ ಮಾಡಲಾಗಿದೆ ಎಂದರು.

ದೊಡಬಳ್ಳಾಪುರ ಶಾಸಕ ವೆಂಕಟರಮಣಯ್ಯ ಅವರ ಪ್ರಶ್ನೆಗೆ ಉತ್ತರಿಸಿದ ಸಮಾಜ ಕಲ್ಯಾಣ ಸಚಿವರು, ದೊಡ್ಡಬಳ್ಳಾಪುರ ವಿಧಾನಸಭಾ ಕ್ಷೇತ್ರಕ್ಕೆ 14 ಡಾ. ಬಿ.ಆರ್. ಅಂಬೇಡ್ಕರ್ ಭವನ ಮತ್ತು 1 ವಾಲ್ಮೀಕಿ ಭವನವನ್ನು ಮಂಜೂರು ಮಾಡಲಾಗಿದೆ. ಆ ಪೈಕಿ 1 ಭವನ ಪೂರ್ಣಗೊಂಡಿದ್ದು, ಉಳಿದ ಭವನಗಳ ಕಾಮಗಾರಿಗಳನ್ನು ಹಂತ ಹಂತವಾಗಿ ಕೈಗೆತ್ತಿಕೊಳ್ಳಲಾಗುವುದೆಂದರು.

ಚಿಂತಾಮಣಿ ಶಾಸಕ ಎಂ.ಕೃಷ್ಣಾ ರೆಡ್ಡಿ ಅವರ ಪ್ರಶ್ನೆಗೆ ಉತ್ತರಿಸಿದ ಸಮಾಜ ಕಲ್ಯಾಣ ಸಚಿವರು ಚಿಂತಾಮಣಿ ತಾಲ್ಲೂಕಿಗೆ 100 ಲಕ್ಷಗಳ ಅನುದಾನದಲ್ಲಿ ವಾಲ್ಮೀಕಿ ಭವನ ನಿರ್ಮಿಸಲು ಮಂಜೂರಾತಿ ನೀಡಿದ್ದು, ಪ್ರಥಮ ಹಂತದಲ್ಲಿ 50 ಲಕ್ಷ ರೂ. ಗಳನು ಬಿಡುಗಡೆ ಮಾಡಲಾಗಿದೆ. ನಿರ್ಮಿತಿ ಕೇಂದ್ರದವರು ಕಾಮಗಾರಿ ಪ್ರಾರಂಭಿಸಲು ವಿಳಂಬ ಮಾಡಿದ ಕಾರಣ ಭವನ ನಿರ್ಮಾಣ ಕಾರ್ಯವನ್ನು ಕೆಆರ್‌ಐಡಿಎಲ್ ಚಿಕ್ಕಬಳ್ಳಾಪುರ ಇವರಿಗೆ ವಹಿಸಲಾಗಿದೆ ಎಂದರು.

ಬಂಗಾರಪೇಟೆ ಶಾಸಕ ಎಸ್.ಎನ್.ನಾರಾಯಣಸ್ವಾಮಿ ಅವರ ಪ್ರಶ್ನೆಗೆ ಉತ್ತರಿಸಿದ ಸಮಾಜ ಕಲ್ಯಾಣ ಸಚಿವರು ವಿದ್ಯಾಸಿರಿ ಯೋಜನೆಯಡಿ ರಾಜ್ಯದ 30 ಜಿಲ್ಲೆಗಳಲ್ಲಿ 2013-14 ನೇ ಸಾಲಿನಲ್ಲಿ 31,955, 2014-15 ರಲ್ಲಿ 66659, 2015-16 ನೇ ಸಾಲಿನಲ್ಲಿ 96,468, 2016-17ನೇ ಸಾಲಿನಲ್ಲಿ 79961 ವಿದ್ಯಾರ್ಥಿಗಳು ಪ್ರಯೋಜನೆ ಪಡೆದಿದ್ದಾರೆ ಎಂದರು.

ಸಿ.ಟಿ.ರವಿ ಚಿಕ್ಕಮಗಳೂರು ಶಾಸಕರ ಚುಕ್ಕೆ ಗುರುತಿನ ಪ್ರಶ್ನೆಗೆ ಉತ್ತರಿಸಿದ ವೈದ್ಯಕೀಯ ಶಿಕ್ಷಣ ಸಚಿವ ಶರಣ ಪ್ರಕಾಶ್ ಪಾಟೀಲ್, 2017-18 ನೇ ಸಾಲಿನ ಆಯವ್ಯಯದಲ್ಲಿ ಚಿಕ್ಕಮಗಳೂರಿಗೆ ಸರ್ಕಾರಿ ವೈದ್ಯಕೀಯ ಕಾಲೇಜನ್ನು ಘೋಷಣೆ ಮಾಡಿದ್ದು, ಮುಂದಿನಸಾಲಿನಿಂದ ಸದರಿ ಕಾಲೇಜನ್ನು ಪ್ರಾರಂಭಿಸಲು ಎಂಸಿಐ ಮತ್ತು ಕೇಂದ್ರ ಸರ್ಕಾರಕ್ಕೆ ಅನುಮತಿ ಕೋರಿದ್ದು, ಅದು ಬಂದ ನಂತರ ವೈದ್ಯಕೀಯ ಕಾಲೇಜನ್ನು ಕಾರ್ಯಾರಂಭ ಮಾಡಲಾಗುವುದೆಂದರು

ಹಿರೇಕೆರೂರು ಶಾಸಕ ಬಣಕಾರ್, ಯು.ಬಿ. ವರ ಪ್ರಶ್ನೆಗೆ ಉತ್ತರಿಸಿದ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವ ಕೆ. ಆರ್. ರಮೇಶ್‌ಕುಮಾರ್. ಸದರಿ ಸಾಲಿನಲ್ಲಿ 114 ತಾಲ್ಲೂಕುಗಳಲ್ಲಿ ಡಯಾಲಿಸಿಸ್ ಘಟಕಗಳನ್ನು ಸಾರ್ವಜನಿಕ-ಖಾಸಗಿ ಸಹಭಾಗಿತ್ವದಡಿಯಲ್ಲಿ

ಪ್ರಾರಂಭಿಸಲಾಗುತ್ತಿದ್ದು, ಜೂನ್ 2017 ರ ಅಂತ್ಯದೊಳಗೆ ಎಲ್ಲಾ ಘಟಕಗಳನ್ನು ಆರಂಭಗೊಳಿಸಲಾಗುವುದು.

ಮೋಹಿಯುದ್ದೀನ್ ಬಾವಾ, ಮಂಗಳೂರು ನಗರ ಉತ್ತರ ಕ್ಷೇತ್ರ ಶಾಸಕರ ಪ್ರಶ್ನೆಗೆ ಉತ್ತರಿಸಿದ ಆಹಾರ ಮತ್ತು ನಾಗರೀಕ ಸರಬರಾಜು ಇಲಾಖೆ ಸಚಿವ ಯು.ಟಿ. ಖಾದರ್, ಹೊಸದಾಗಿ ಪಡಿತರ ಚೀಟಿಗೆ ಅರ್ಜಿ ಸಲ್ಲಿಸುವವರು ನಗರ ಪ್ರದೇಶದಲ್ಲಿ ಬೆಂಗಳೂರು ಒನ್ ಕೇಂದ್ರದಲ್ಲಿ, ಅಟಲ್‌ಜೀ ಜನಸ್ನೇಹಿ ಕೇಂದ್ರ ಹಾಗೂ ಆಹಾರ ಇಲಾಖೆ ಗುರುತಿಸಿರುವ ಖಾಸಗಿ ಸ್ನೇಹಾ ಕೇಂದ್ರ ಹಾಗೂ ಗ್ರಾಮೀನ ಪ್ರದೇಶದಲ್ಲಿ ಗ್ರಾಮ ಪಂಚಾಯಿತಿಯಲ್ಲಿ ಅರ್ಜಿ ಸಲ್ಲಿಸಬಹುದು ಎಂದ ಅವರು ಕುಟುಂಬದ ಎಲ್ಲಾ ಸದಸ್ಯರ ಆಧಾರ್ ಕಾರ್ಡ್ ಸಂಖ್ಯೆಯನ್ನು ಕಡ್ಡಾಯವಾಗಿ ಸಲ್ಲಿಸಬೇಕೆಂದರು.

ಹೊನ್ನಾಳಿ ಶಾಸಕ ಶಾಂತನಗೌಡ ಡಿ.ಜಿ. ಅವರ ಪ್ರಶ್ನೆಗೆ ಉತ್ತರಿಸಿದ ಆಹಾರ ಮತ್ತು ನಾಗರೀಕ ಸಚಿವರಾಜು ಸಚಿವರು, ಹೊಸದಾಗಿ ಅರ್ಜಿ ಸಲ್ಲಿಸದವರಿಗೆ ಇಲ್ಲಿಯವರೆಗೆ 33,828 ಬಿಪಿಎಲ್ ಮತ್ತು 4923 ಎಪಿಎಲ್ ಪಡಿತರ ಚೀಟಿ ನೀಡಲಾಗಿದೆ ಎಂದರು. 2017-18 ನೇ ಸಾಲಿನಿಂದ ಪಡಿತರ ಚೀಟಿದಾರರಿಗೆ ಸಕ್ಕರೆ ಮತ್ತು ಉಪ್ಪು ವಿತರಣೆ ಮಾತ್ರ ನಿಲ್ಲಿಸಿದ್ದು, ಸೀಮೆಎಣ್ಣೆ ಮತ್ತು ಬೇಳೆಕಾಳುಗಳ ಸಹ ಹಂಚಿಕೆಯನ್ನು ಮುಂದುವರಿಸಲಾಗಿದೆ ಎಂದರು.

ಶಿಗ್ಗಾಂವ್ ಶಾಸಕ ಬಸವರಾಜ ಬೊಮ್ಮಾಯಿ ಅವರ ಚುಕ್ಕೆ ಗುರುತಿನ ಪ್ರಶ್ನೆಗೆ ಉತ್ತರಿಸಿದ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಚಿವೆ ಶ್ರೀಮತಿ ಉಮಾಶ್ರಿ ಅವರು, ಕನಕದಾಸರ ಸಾಹಿತ್ಯ ಪ್ರಚಾರ ಮಾಡಲು ನಮ್ಮ ಇಲಾಖೆಯ ಅಂಗ ಸಂಸ್ಥೆಯಾದ ರಾಷ್ಟ್ರೀಯ ಸಂತಕವಿ ಕನಕದಾಸ ಅಧ್ಯಯನ ಮತ್ತು ಸಂಶೋಧನಾ ಕೇಂದ್ರದ ವತಿಯಿಂದ ಹಲವಾರು ರಚನಾತ್ಮಕ ಯೋಜನೆಗಳನ್ನು ರೂಪಿಸಿಕೊಂಡು ಜಾರಿಗೊಳಿಸಲಾಗುವುದು. ಜೊತೆಗೆ ಕನಕದಾಸರ ಕೀರ್ತನೆ, ಕಾವ್ಯ ಮತ್ತು ಮುಂದಿಗೆಗಳ ಸಂಪುಟಗಳನ್ನು ಪ್ರಕಟಿಸಿ ಇಲಾಖೆ ಹೊರತಂದಿದೆ. ಸಂತ ಶಿಶುನಾಳ ಶರೀಫರ ಸಾಹಿತ್ಯ ಪ್ರಚಾರ ಮತ್ತು ಅವರ ಜನ್ಮಸ್ಥಳ ಅಭಿವೃದ್ಧಿಗೊಳಿಸುವ ಬಗ್ಗೆ ಮುಖ್ಯಮಂತ್ರಿಗಳೊಂದಿಗೆ ಚರ್ಚಿಸಲಾಗುವುದೆಂದರು.

## ಕೌಶಲ್ಯ ಕರ್ನಾಟಕ: ಸೀಮೆನ್ಸ್ ಇಂಡಸ್ಟ್ರಿ ಸಾಫ್ಟ್‌ವೇರ್ ಒಡಂಬಡಿಕೆ

ಬೆಂಗಳೂರು, ಜೂನ್ 8 (ಕರ್ನಾಟಕ ವಾರ್ತೆ)-

ಕರ್ನಾಟಕ ಸರ್ಕಾರದ ಕೌಶಲ್ಯಾಭಿವೃದ್ಧಿ, ಉದ್ಯಮಶೀಲತೆ ಮತ್ತು ಜೀವನೋಪಾಯ ಇಲಾಖೆ ಹಾಗೂ ವಾಣಿಜ್ಯ ಮತ್ತು ಕೈಗಾರಿಕಾ ಇಲಾಖೆ ಕೌಶಲ್ಯ ಕರ್ನಾಟಕ ಯೋಜನೆಯಡಿ ಕುಶಲತೆಯ ಬೆಂಬಲ ಯುವ ಕೈಗಳಿಗೆ ಬಲ ಧ್ಯೇಯದೊಂದಿಗೆ ಸರ್ಕಾರಿ ಉಪಕರಣಗಾರ ಮತ್ತು ತರಬೇತಿ ಕೇಂದ್ರದ ಬೆಂಗಳೂರು, ಮೈಸೂರು, ದಾಂಡೇಲಿ ಮತ್ತು ಕಲಬುರಗಿ ಉಪ ಕೇಂದ್ರಗಳಲ್ಲಿ ಮೆ: ಸೀಮೆನ್ಸ್ ಇಂಡಸ್ಟ್ರಿ ಸಾಫ್ಟ್‌ವೇರ್‌ನೊಂದಿಗೆ ಒಡಂಬಡಿಕೆ ಮಾಡಿಕೊಂಡು ಶ್ರೇಷ್ಠತಾ ಕೇಂದ್ರಗಳನ್ನಾಗಿ ರೂಪಿಸಲು ಯೋಜಿಸಿದೆ.

**ಜೂನ್ 9 ರಂದು ವಿಧಾನ ಸೌಧದ ಮೂರನೇ ಮಹಡಿಯ ಸಮ್ಮೇಳನ ಸಭಾಂಗಣದಲ್ಲಿ ಸಂಜೆ 5–00 ಗಂಟೆಗೆ ನಡೆಯಲಿರುವ ಒಡಂಬಡಿಕೆ ಸಹಿ ಹಾಕುವ ಕಾರ್ಯಕ್ರಮದಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಬೃಹತ್ ಕೈಗಾರಿಕೆ ಸಚಿವ ಆರ್.ವಿ. ದೇಶಪಾಂಡೆ ಸೇರಿದಂತೆ ಅನೇಕ ಹಿರಿಯ ಸಚಿವರುಗಳು ಹಾಗೂ ಮೆ: ಸೀಮೆನ್ಸ್ ಇಂಡಸ್ಟ್ರಿ ಸಾಫ್ಟ್‌ವೇರ್ ಉನ್ನತಾಧಿಕಾರಿಗಳು ಉಪಸ್ಥಿತರಿರುವರು.**

**ಆಟೋಮೋಟಿವ್, ಏರೋಸ್ಪೇಸ್, ರಕ್ಷಣೆ, ಇಂಡಸ್ಟ್ರಿಯಲ್ ಮೆಷಿನರಿ, ರಿನಿವಬಲ್ ಎನರ್ಜಿ ವಿಭಾಗಗಳಲ್ಲಿ ಒಟ್ಟು 2031.80 ಕೋಟಿ ರೂ. ಗಳ ಒಟ್ಟು ಒಡಂಬಡಿಕೆಯಾಗಲಿದೆ. ಅದರಲ್ಲಿ ಮೆ: ಸೀಮೆನ್ಸ್ ಸಂಸ್ಥೆಯ ಪಾಲು 1822.48 ಕೋಟಿ ರೂ. ಆಗಿದ್ದು ಹಾಗೂ ಕರ್ನಾಟಕ ಸರ್ಕಾರದ ಪಾಲು 219.32 ಕೋಟಿ ರೂ. ಇರುತ್ತದೆ.**

**ಯುವಕರಿಗೆ ಕೌಶಲ್ಯಾಭಿವೃದ್ಧಿ ತರಬೇತಿ ನೀಡುವುದರ ಜೊತೆಗೆ ಅಂತಾರಾಷ್ಟ್ರೀಯ ಗುಣಮಟ್ಟದ ತಾಂತ್ರಿಕ ಶಿಕ್ಷಣ, ಉತ್ಕೃಷ್ಟ ದರ್ಜೆಯ ಉದ್ಯಮ ಶೀಲತೆ ನೀಡುವುದು ಈ ಒಡಂಬಡಿಕೆಯ ಮುಖ್ಯ ಉದ್ದೇಶವಾಗಿದೆ. ಬೆಂಗಳೂರು, ಮೈಸೂರು, ದಾಂಡೇಲಿ ಮತ್ತು ಕಲಬುರಗಿ ಉಪ ಕೇಂದ್ರಗಳಲ್ಲಿ 25,000 ದಿಂದ 30,000 ತಾಂತ್ರಿಕ ವಿದ್ಯಾರ್ಹತೆಯುಳ್ಳ ಅಭ್ಯರ್ಥಿಗಳಿಗೆ ತರಬೇತಿ ನೀಡಿ ಅವರ ಕೌಶಲ್ಯಾ ಭಿವೃದ್ಧಿಯನ್ನು ಹೆಚ್ಚಿಸಲಿದೆ. ಯುವಜನರ ಕೌಶಲ್ಯ ಹೆಚ್ಚಿಸಿ, ಉದ್ಯೋಗಾವಕಾಶ ಸೃಷ್ಟಿಸುವಲ್ಲಿ ಇದು ಮಹತ್ತರ ಹೆಜ್ಜೆಯಾಗಲಿದೆ.**

# ಜೂನ್ 9 ರಿಂದ 22 ರವರೆಗೆ
# ರಾಜ್ಯ ಮಟ್ಟದ ಕಾಷ್ಠ ಶಿಲ್ಪಕಲಾ ಶಿಬಿರ

ಬೆಂಗಳೂರು, ಜೂನ್ 8, (ಕರ್ನಾಟಕ ವಾರ್ತೆ)

ಕರ್ನಾಟಕ ಶಿಲ್ಪಕಲಾ ಅಕಾಡೆಮಿ ಮತ್ತು ಬೆಂಗಳೂರು ಮೆಟ್ರೋ ರೈಲ್ ನಿಗಮ ನಿಯಮಿತ ಸಂಯುಕ್ತಾಶ್ರಯದಲ್ಲಿ ರಾಜ್ಯ ಮಟ್ಟದ ಕಾಷ್ಠ ಶಿಲ್ಪಕಲಾ ಶಿಬಿರವು ಜೂನ್ 9 ರಿಂದ 22 ರವರೆಗೆ ನಡೆಯಲಿದೆ.

ಜೂನ್ 9 ರಂದು ಮಧ್ಯಾಹ್ನ 12.00 ಗಂಟೆಗೆ ನಗರದ ಹಳೇ ಮದ್ರಾಸ್ ರಸ್ತೆಯಲ್ಲಿರುವ ಬೆಂಗಳೂರು ಹಾತ್, ಸ್ವಾಮಿ ವಿವೇಕಾನಂದ ಮೆಟ್ರೋ ನಿಲ್ದಾಣದ ಬಳಿ ಹಮ್ಮಿಕೊಂಡಿರುವ ಈ ಶಿಬಿರದ ಉದ್ಘಾಟನೆಯನ್ನು ಬಿ.ಎಂ.ಆರ್.ಸಿ.ಎಲ್. ನ ವ್ಯವಸ್ಥಾಪಕ ನಿರ್ದೇಶಕ ಪ್ರದೀಪ್ ಸಿಂಗ್ ಖರೋಲ ಅವರು ನಡೆಸಿಕೊಡಲಿದ್ದಾರೆ.

ಮುಖ್ಯ ಅತಿಥಿಯಾಗಿ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ನಿರ್ದೇಶಕರಾದ ಶ್ರೀಮತಿ ಎಂ.ಎಸ್. ಅರ್ಚನಾ ಅವರು ಪಾಲ್ಗೊಳ್ಳಲಿರುವರು. ಸಮಾರಂಭದ ಅಧ್ಯಕ್ಷತೆಯನ್ನು ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಜಂಟಿ ನಿರ್ದೇಶಕರು ಹಾಗೂ ಆಡಳಿತಾಧಿಕಾರಿಗಳಾದ ಅಶೋಕ ಎನ್. ಚಲುವಾದಿ ಅವರು ವಹಿಸಲಿದ್ದಾರೆ.

ಈ ಶಿಬಿರದ ಸಮಾರೋಪ ಸಮಾರಂಭವನ್ನು ಜೂನ್ 22 ರಂದು ಸಂಜೆ 4.00 ಗಂಟೆಗೆ ಎಂ.ಜಿ. ರಸ್ತೆಯ ರಂಗೋಲಿ ಮೆಟ್ರೋ ಕಲಾಕೇಂದ್ರದಲ್ಲಿ ಹಮ್ಮಿಕೊಳ್ಳಲಾಗಿದೆ.

ಈ ಶಿಬಿರದಲ್ಲಿ ರಚಿತವಾಗುವ ಕಲಾಕೃತಿಗಳನ್ನು ಜೂನ್ 20 ರಿಂದ 30 ರವರೆಗೆ ಒಂದು ವಾರಗಳ ಕಾಲ ಎಂ. ಜಿ. ರಸ್ತೆಯಲ್ಲಿರುವ ರಂಗೋಲಿ ಮೆಟ್ರೋ ಕಲಾಕೇಂದ್ರದಲ್ಲಿ ಪ್ರದರ್ಶನವನ್ನು ಸಹ ಏರ್ಪಡಿಸಲಾಗುತ್ತಿದ್ದು, ಕಲಾರಸಿಕರು ಭೇಟಿ ನೀಡಬಹುದಾಗಿದೆ.

ಎಸ್‌ಎಂ:ಜೆಡಿ:ಜಿಪಿಆರ

# ಮಹಿಳಾ ಸಾಧಕಿಯರಿಗೆ
# ಡಾ. ಪಾರ್ವತಮ್ಮ ರಾಜ್‌ಕುಮಾರ್ ಪ್ರಶಸ್ತಿ

ಬೆಂಗಳೂರು, ಜೂನ್ 8, (ಕರ್ನಾಟಕ ವಾರ್ತೆ)

ಕನ್ನಡ ಚಲನಚಿತ್ರ ರಂಗದಲ್ಲಿ ಸಾಧನೆಗೈದ ಮಹಿಳೆಯರಿಗೆ ಡಾ. ಪಾರ್ವತಮ್ಮ ರಾಜ್‌ಕುಮಾರ್ ಹೆಸರಿನಲ್ಲಿ ಒಂದು ಲಕ್ಷ ರೂ. ಮೊತ್ತದ ಪ್ರಶಸ್ತಿ ಸ್ಥಾಪಿಸುವ ಇಂಗಿತವನ್ನು ಕರ್ನಾಟಕ ಚಲನಚಿತ್ರ ಅಕಾಡೆಮಿ ಅಧ್ಯಕ್ಷ ಎಸ್. ವಿ. ರಾಜೇಂದ್ರಸಿಂಗ್ ಬಾಬು ಅವರು ವ್ಯಕ್ತಪಡಿಸಿದರು.

ಇಂದು ನಗರದ ಗಾಂಧಿ ಭವನದಲ್ಲಿ ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ ಮತ್ತು ಕರ್ನಾಟಕ ಚಲನಚಿತ್ರ ಅಕಾಡೆಮಿ ಸಂಯುಕ್ತಾಶ್ರಯದಲ್ಲಿ ಹಮ್ಮಿಕೊಂಡಿದ್ದ ಡಾ. ಪಾರ್ವತಮ್ಮ ರಾಜ್‌ಕುಮಾರ್ ಒಂದು ನೆನಪು ಕಾರ್ಯಕ್ರಮದ ಅಧ್ಯಕ್ಷತೆಯನ್ನು ವಹಿಸಿ ಮಾತನಾಡಿದ ಅವರು ಭಾರತ ಚಲನಚಿತ್ರ ರಂಗದಲ್ಲಿ 80 ಸಿನಿಮಾಗಳನ್ನು ನಿರ್ಮಿಸಿ ಇತಿಹಾಸ ಬರೆದಿರುವ ಏಕೈಕ ನಿರ್ಮಾಪಕಿ ಪಾರ್ವತಮ್ಮ ಅವರಾಗಿದ್ದು ಕನ್ನಡ ಚಲನಚಿತ್ರ ರಂಗಕ್ಕೆ ಅವರ ಕೊಡುಗೆ ಅಪಾರ ಹಾಗಾಗಿ ಅವರ ಹೆಸರಿನಲ್ಲಿ ಪ್ರಶಸ್ತಿಯೊಂದನ್ನು ಸ್ಥಾಪಿಸಿ ಚಲನಚಿತ್ರ ರಂಗದಲ್ಲಿ ಅತ್ಯುತ್ತಮ ಸಾಧನೆಗೈದ ಮಹಿಳೆಯರಿಗೆ ನೀಡಲು ಉದ್ದೇಶಿಸಲಾಗಿದ್ದು, ಶೀಘ್ರದಲ್ಲಿ ಸರ್ಕಾರಕ್ಕೆ ಮನವಿ ಸಲ್ಲಿಸಲಾಗುವುದು ಎಂದರು.

ಕನ್ನಡ ಚಿತ್ರರಂಗದ ದೊಡ್ಡಮನೆ ಎಂದೇ ಹೆಸರಾದ ಡಾ.ರಾಜ್‌ಕುಮಾರ್ ಕುಟುಂಬ ಕನ್ನಡ ಚಲನಚಿತ್ರಗಳ ಬೆಳವಣಿಗೆಗೆ ಸಾಕ್ಷಿಯಾಗಿ ನಿಂತ ಆಲದಮರವಾಗಿದ್ದು, ಇಂದು ನಮ್ಮ ಕನ್ನಡ ಚಿತ್ರರಂಗ ಈ ಮಟ್ಟಕ್ಕೆ ಬೆಳೆಯಲು ಪಾರ್ವತಮ್ಮ ರಾಜ್‌ಕುಮಾರ್ ಎಂದರೆ ತಪ್ಪಾಗಲಾರದು.

ನಿರ್ಮಾಪಕರು ಸಾಹಿತ್ಯ ಓದುವದನ್ನು ರೂಢಿಸಿಕೊಂಡರೆ ಪಾರ್ವತಮ್ಮ ರಾಜ್‌ಕುಮಾರ್ ಅವರಿಗೆ ದೊಡ್ಡ ನಮನ ಸಲ್ಲಿಸಿದಂತೆ, ಅವರೊಬ್ಬ ಅತ್ಯುತ್ತಮ ಓದುಗರಾಗಿದ್ದರು. ಅತ್ಯುತ್ತಮ ಸಾಹಿತ್ಯದ ಕೃತಿಗಳನ್ನು ಚಲನಚಿತ್ರಗಳಾಗಿ ನಿರ್ಮಿಸಿದ ಕೀರ್ತಿ ಅವರದ್ದು ಎಂದು ಹೇಳಿದರು.

ಆಶಯ ಭಾಷಣ ಮಾಡಿದ ಸಾಹಿತಿ ಹಾಗೂ ಚಿಂತಕ ಡಾ. ಬರಗೂರು ರಾಮಚಂದ್ರಪ್ಪ ಅವರು ಮಾತನಾಡಿ ಪಾರ್ವತಮ್ಮನವರ ವ್ಯಕ್ತಿತ್ವದಲ್ಲಿ ನಗರ ಮತ್ತು ಹಳ್ಳಿ ಎರಡೂ ಇತ್ತು. ಅವರೊಬ್ಬ ನಿರ್ಮಾಪಕಿಯಾಗಿ ಯಶಸ್ವಿಯಾಗಲು ನಗರ ವ್ಯಕ್ತಿತ್ವ ಹಾಗೂ ಕೂಡು ಕುಟುಂಬವನ್ನು ಮುನ್ನೆಡೆಸುತ್ತಾ ಡಾ.ರಾಜ್ ಅವರ ಬೆನ್ನೆಲುಬಾಗಿ ನಿಂತಿದ್ದ ಅವರಲ್ಲಿ ಹಳ್ಳಿಯ ಮುಗ್ಧ ಹೆಣ್ಣು ಮಗಳಿದ್ದಳು.

ರಾಜ್‌ಕುಮಾರ್ ಪ್ರಭಾವಳಿ ಪಾರ್ವತಮ್ಮನಿಗಿತ್ತು. ಅದನ್ನು ಮೀರಿ ಅದರ ಆಚೇ ಒಬ್ಬ ನಿರ್ಮಾಪಕಿತಯಾಗಿ ಕನ್ನಡ ಚಲನಚಿತ್ರರಂಗದ ಮಹಿಳಾ ಶಕ್ತಿಯಾಗಿ ಬೆಳೆದಿದ್ದು ಅದು ಅವರತನ. ಪುರುಷ ಪ್ರಧಾನ ಸಮಾಜದಲ್ಲಿ ಹೆಣ್ಣು ಒಬ್ಬಳು ಬೆಳೆಯುವುದ ಕಷ್ಟಕರ. ಅಂತಹದರಲ್ಲಿ ಅವರು 80 ಕನ್ನಡ ಚಲನಚಿತ್ರಗಳನ್ನು ನಿರ್ಮಿಸಿದ್ದು ಒಂದು ಸಾಧನೆ ಎಂದು ಹೇಳಿದರು.

ಆಹ್ವಾನಿತರಾಗಿ ಆಗಮಿಸಿದ್ದ ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆಯ ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ ಎಂ. ಲಕ್ಷ್ಮೀನಾರಾಯಣ ಅವರು ಮಾತನಾಡಿ 1990 ರ ದಶಕದಲ್ಲಿ ಸರ್ಕಾರ ಜಿಲ್ಲೆಗೊಂದು ರಂಗಮಂದಿರ ಯೋಜನೆ ಜಾರಿಗೆ ತಂದಾಗ ಸ್ಥಳೀಯ ಹಣ ಸಂಗ್ರಹಕ್ಕಾಗಿ ಮನೋರಂಜನಾ ಕಾರ್ಯಕ್ರಮಗಳನ್ನು ಹಮ್ಮಿಕೊಂಡಾಗ ಡಾ. ರಾಜ್‌ಕುಮಾರ್ ದಂಪತಿಗಳು ಕಲಬುರಗಿ ಮತ್ತು ಬೆಳಗಾವಿಯಂತಹ ದೂರದ ಊರುಗಳಿಗೆ ಆಗಮಿಸಿ ಯಾವುದೇ ಬೇಡಿಕೆ ಇಲ್ಲದೇ ಕಾರ್ಯಕ್ರಮಗಳನ್ನು ನಡೆಸಿಕೊಟ್ಟ ಸರಳತೆಯನ್ನು ಸ್ಮರಿಸಿಕೊಂಡರು.

ಕನ್ನಡ ಚಲನಚಿತ್ರರಂಗದಲ್ಲಿ ಹಲವು ಯಶಸ್ವಿ ಕಲಾವಿದರಿಗೆ ಅವಕಾಶ ನೀಡಿ ಬೆಳೆಸಿದ ಕೀರ್ತಿ ಡಾ. ಪಾರ್ವತಮ್ಮ ರಾಜ್‌ಕುಮಾರ್ ಅವರಿಗೆ ಸಲ್ಲುತ್ತದೆ. ಡಾ.ರಾಜ್‌ರ ಪ್ರತಿ ಹೆಜ್ಜೆಯಲ್ಲೂ ಪಾರ್ವತಮ್ಮ ಅವರ ಕೊಡುಗೆ ಅಪಾರ ಎಂದರು.

ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆಯ ನಿರ್ದೇಶಕ ಎನ್. ಆರ್. ವಿಶುಕುಮಾರ್ ಅವರು ಮಾತನಾಡಿ ಚಲನಚಿತ್ರ ರಂಗಕ್ಕೆ ರಾಜ್‌ಕುಮಾರ್ ಅವರನ್ನು ಕೊಡುಗೆ ಕೊಟ್ಟವರು ಡಾ. ಪಾರ್ವತಮ್ಮ ರಾಜ್‌ಕುಮಾರ್ ಅವರು ಎಂದರೆ ಅತಿಶಯೋಕ್ತಿಯಾಗಲಾರದು. ಬೇರೊಬ್ಬ ಯಾವ ನಟರ ಈ ತರಹದ ಕುಟುಂಬವನ್ನು ನಾನು ನೋಡಿಲ್ಲ, ಕೌಟುಂಬಿಕ ಬಾಂಧವ್ಯಕ್ಕೆ ಮಾದರಿ ಪಾರ್ವತಮ್ಮ ಅವರು ಎಂದು ಹೇಳಿದರು.

ಕಾರ್ಯಕ್ರಮದಲ್ಲಿ ರಾಘವೇಂದ್ರ ರಾಜ್‌ಕುಮಾರ್, ಶಿವರಾಜ್ ಕುಮಾರ್, ಪುನೀತ್ ರಾಜ್‌ಕುಮಾರ್ ಸೇರಿದಂಥೆ ರಾಜ್ ಕುಟುಂಬ ಸದಸ್ಯರು ಹಾಗೂ ಚಲನಚಿತ್ರರಂಗದ ಹಿರಿಯ ಹಾಗೂ ಕಿರಿಯ ಕಲಾವಿದರು ಸೇರಿದಂತೆ ಅನೇಕ ಗಣ್ಯರು ಉಪಸ್ಥಿತರಿದ್ದರು.

ಎಸ್‌ಎಂ:ಜೆಡಿ:ಜಿಪಿಆರ್.

## ಐತಿಹಾಸಿಕ ದಾಖಲೆಗಳ ಸಂರಕ್ಷಣೆ ನೆರವಿಗೆ ಅರ್ಜಿ ಆಹ್ವಾನ

ಬೆಂಗಳೂರು, ಜೂನ್ 8 (ಕರ್ನಾಟಕ ವಾರ್ತೆ)-

ರಾಷ್ಟ್ರೀಯ ಪತ್ರಾಗಾರ, ನವದೆಹಲಿ ಇವರು 2017-18 ನೇ ಸಾಲಿಗೆ ಕೇಂದ್ರ ಹಣಕಾಸು ನೆರವಿನ ಯೋಜನೆಯಡಿ ಕರ್ನಾಟಕ ರಾಜ್ಯದಲ್ಲಿನ ಐತಿಹಾಸಿಕ ದಾಖಲೆಗಳ ಸಂರಕ್ಷಣೆ, ಹಸ್ತಪ್ರತಿಗಳು, ಅಪರೂಪದ ಪುಸ್ತಕಗಳು, ಅಮೂಲ್ಯ ದಾಖಲೆಗಳು ಐತಿಹಾಸಿಕ ದಾಖಲೆಗಳು, ಪತ್ರಾಗಾರಕ್ಕೆ ಯೋಗ್ಯವಾದ ಛಾಯಾಚಿತ್ರಗಳು, ಮುದ್ರಣಗಳನ್ನು ಜೋಪಾನ ಪಡಿಸುವಿಕೆ/ಸಂರಕ್ಷಿಸುವಿಕೆ, ದುರಸ್ತಿ, ಪ್ರಕಟಣೆ, ಪಟ್ಟಿ ಮಾಡುವಿಕೆ, ಮಾರ್ಗದರ್ಶಕಗಳ ಸಂಗ್ರಹಣೆ, ಮೈಕ್ರೋಫಿಲ್ಮಿಂಗ್ ಹಾಗೂ ಡಿಜಿಟೈಜ್ ಇವುಗಳ ದುರಸ್ತಿ ಮತ್ತು ನವೀಕರಣಗೊಳಿಸುವುದಕ್ಕಾಗಿ ಕಂಪ್ಯೂಟರ್/ವ್ಯಾಕ್ಯೂಂಕ್ಲೀನರ್/ಸ್ಕ್ಯಾನರ್/ರೆಪ್ರೋಗ್ರಾಫಿ ಸಂರಕ್ಷಣೆಯಲ್ಲಿ ತೊಡಗಿಸಿಕೊಂಡಿರುವ ನೋಂದಾಯಿತ ಸ್ವಯಂ ಸಂಘ/ಸಂಸ್ಥೆಗಳು, ವ್ಯಕ್ತಿಗಳು, ವಿಶ್ವವಿದ್ಯಾಲಯಗಳು ಹಾಗೂ ಡೀಮ್ಡ್ ವಿಶ್ವವಿದ್ಯಾಲಯಗಳಿಂದ ಅರ್ಜಿಗಳನ್ನು ಆಹ್ವಾನಿಸಿದೆ.

ಈ ಯೋಜನೆಯಡಿ ವಿಸ್ತರಿಸಬಹುದಾದ ಹಣಕಾಸು ನೆರವಿನ ಗರಿಷ್ಠ ಮಿತಿಯು ರೂ. 10.00 ಲಕ್ಷ (ಹತ್ತು ಲಕ್ಷ ಮಾತ್ರ) ವಾಗಿರುತ್ತದೆ ಮತ್ತು ಯೋಜನೆಯು ಒಟ್ಟು ವೆಚ್ಚದ 75:25 ಅನುಪಾತದಲ್ಲಿರುತ್ತದೆ. (ಅಂದರೆ ಕೇಂದ್ರ ಸರ್ಕಾರದ ಪಾಲು 75% ರಷ್ಟು ಮತ್ತು ಸಂಘ/ಸಂಸ್ಥೆಗಳ ಪಾಲು 25 ರಷ್ಟು)

ನಿಗದಿತ ಅರ್ಜಿ ನಮೂನೆ ಹಾಗೂ ವಿವರಗಳಿಗೆ ರಾಷ್ಟ್ರೀಯ ಪತ್ರಾಗಾರ, ನವದೆಹಲಿಯ ಅಂತರ್ಜಾಲ **www.national archives.nic.in Section Grants-in-aid on home page** ಹಾಗೂ **www.karnataka state archives.com** ನಿಂದ ಪಡೆದು ಭರ್ತಿಮಾಡಿ ಸಲ್ಲಿಸುವುದು.

ರಾಜ್ಯ ಮಟ್ಟದ ಶೋಧಕ ಸಮಿತಿಯು ಆಹ್ವಾನಿತ ಅರ್ಜಿಗಳನ್ನು ಪರಿಶೀಲಿಸಿ, ಸೂಕ್ತ ಆಯ್ಕೆ ಪಟ್ಟಿಯನ್ನು ಛೇರ್ಮನ್, ಗ್ರಾಂಟ್ಸ್ ಕಮಿಟಿ ಅಂಡ್ ಡೈರೆಕ್ಟರ್ ಜನರಲ್ ನ್ಯಾಷನಲ್ ಆರ್ಕಿವ್ಸ್ ಆಫ್ ಇಂಡಿಯಾ, ಜನಪಥ್ ನವದೆಹಲಿ -110 001 ಇವರಿಗೆ ಕಳುಹಿಸಲಾಗುವುದು.

ನಿಗದಿತ ನಮೂನೆಯಲ್ಲಿರುವ ಅರ್ಜಿಗಳನ್ನು ನಿರ್ದೇಶಕರು, ಕರ್ನಾಟಕ ರಾಜ್ಯ ಪತ್ರಾಗಾರ ಇಲಾಖೆ, ಮೊದಲನೆ ಮಹಡಿ, ಕೊಠಡಿ ಸಂ. 126, ವಿಕಾಸ ಸೌಧ, ಬೆಂಗಳೂರು-01 ಇವರಿಗೆ ದಿನಾಂಕ 15-06-2017 ರಂದು ಸಂಜೆ 5.00 ಗಂಟೆ ಒಳಗೆ ತಲುಪಿಸಲು ಕರ್ನಾಟಕ ರಾಜ್ಯ ಪತ್ರಾಗಾರ ಇಲಾಖೆಯ ಪ್ರಕಟಣೆ ತಿಳಿಸಿದೆ.